## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಳವಳ್ಳಿ

## ಸಿ.ಸಿ. ನಂಃ- 915/2018

ಚಾಸಾ- 1 ಪ್ರಾಸಾ- 1

ಸಾಕ್ಷಿಯನ್ನು ದಿನಾಂಕಃ 23.02.2023 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಚಿಕ್ಕಪುಟ್ಟೇಗೌಡ |
| ತಂದೆ/ಗಂಡನ ಹೆಸರು | ಲಿಂಗೇಗೌಡ |
| ವಯಸ್ಸು | 60 ವರ್ಷ |
| ಉದ್ಯೋಗ | ಕೂಲಿಕೆಲಸ |
| ವಾಸ | ದಳವಾಯಿಕೊಡಿಹಳ್ಳಿ |

## ಮುಖ್ಯ ವಿಚಾರಣೆ- ಮಾನ್ಯ ಸ.ಸ.ಅ. ರವರಿಂದ ಃ-

**1.** ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಚಾಸಾ-2 ರಿಂದ 7 ರವರು ಗೊತ್ತು. ಸುಮಾರು 8 ವರ್ಷದ ಹಿಂದೆ ಬೆಳಗ್ಗೆ 8 ಗಂಟೆ ಸಮಯದಲ್ಲಿ ದಳವಾಯಿಕೋಡಿಹಳ್ಳಿ ಗ್ರಾಮದ ಮುಖ್ಯ ರಸ್ತೆಯ ಬಳಿ ಬರುತ್ತಿದ್ದಾಗ 2ನೇ ಆರೋಪಿ ನನ್ನ ಬಳಿ ಬಂದು ನಾನು ಹಾಕಿಕೊಂಡಿದ್ದ ಟವಲನ್ನು ಹಿಡಿದುಕೊಂಡು ಒಂದು ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾನೆ. ನಂತರ 1ನೇ ಆರೋಪಿ ನನ್ನ ಬಟ್ಟೆಯನ್ನು ಹಿಡಿದು ಹರಿದು ಹಾಕಿ ನನ್ನ ತಲೆಯನ್ನು ಕಂಬಕ್ಕೆ ಹೊಡೆಸಿ ರಕ್ತಗಾಯಪಡಿಸಿರುತ್ತಾನೆ. ನಂತರ ನಮ್ಮ ಊರಿನ ಯಾರೊ ಒಬ್ಬರು ನನ್ನನ್ನು ಕನಕಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನನಗೆ ಜ್ಞಾನ ತಪ್ಪಿದ್ದರಿಂದ ಅವರ ಹೆಸರು ಗೊತ್ತಿಲ್ಲ. ನಾನು ಆಸ್ಪತ್ರೆಯಿಂದ ಬಂದ ನಂತರ ಊರಿನವರು ನ್ಯಾಯಪಂಚಾಯಿತಿ ಮಾಡಿಕೊಡುತ್ತೇವೆ ಎಂದು ತಿಳಿಸಿದ್ದರು ಸುಮಾರು 2 ತಿಂಗಳ ಕಾಲ ನ್ಯಾಯಪಂಚಾಯಿತಿ ಮಾಡುತ್ತೇವೆ ಎಂದು ಕಾಲ ಕಳೆದರು. ಆರೋಪಿಗಳು ನ್ಯಾಯಪಂಚಾಯಿತಿ ಗೆ ಬರಲಿಲ್ಲ ನಂತರ ನಾನು ಹಲಗೂರು ಪೊಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಪೊಲೀಸರು ನನ್ನ ದೂರನ್ನು ಸ್ವೀಕರಿಸಿಕೊಂಡಿರುತ್ತಾರೆ. ಆಗ ಪೊಲಿಸರು ಆರೋಪಿಗಳನ್ನು ಕರೆದು ವಿಚಾರಣೆ ಮಾಡುತ್ತೇವೆ ಎಂದು ತಿಳಿಸಿದ್ದರು. ಆದರೆ ಆರೋಪಿಗಳನ್ನು ಠಾಣೆಗೆ ಕರಸಿರುವುದಿಲ್ಲ. ಪೊಲೀಸ್ ಠಾಣೆ ಹೊರತುಪಡಿಸಿ ನಾನು ಎಲ್ಲಿಯು ದೂರು ನೀಡಿರುವುದಿಲ್ಲ.

**2.** ನನ್ನ ದೂರಿನ ಆಧಾರದ ಮೇಲೆ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಯಾವ ದಿನಾಂಕದಂದು ಬಂದಿರುತ್ತಾರೆ ನನಗೆ ಗೊತ್ತಿಲ್ಲ. ಪೊಲೀಸರಿಗೆ ಘಟನಾ ಸ್ಥಳವನ್ನು ನಾನೆ ತೋರಿಸಿರುತ್ತೇನೆ. ಪೊಲೀಸರು ಬೆಳಗ್ಗೆ 8 ರಿಂದ 9 ಗಂಟೆವರೆಗೆ ಮಹಜರನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಯಾರೂ ಇರಲಿಲ್ಲ . ಯಾರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಯಾವುದೊ ಒಂದು ದಾಖಲೆಗೆ ನನ್ನ ಹೆಬ್ಬೆಟ್ಟು ಗುರುತನ್ನು ಹಾಕಿಸಿಕೊಂಡಿರುತ್ತಾರೆ ಸದರಿ ದಾಖಲೆ ನನಗೆ ಗೊತ್ತಿಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ. ಪೋಲಿಸರು ನನ್ನ ವಿಚಾರಣೆ ಮಾಡಿರುವುದಿಲ್ಲ ಮತುತ ಹೇಳಿಕೆ ಪಡೆದಿರುವುದಿಲ್ಲ.. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ನ್ಯಾಯಾಲಯದಲ್ಲಿ ಸಲ್ಲಿರುವ ಖಾಸಗಿ ದೂರಾಗಿದ್ದು ಸಾಕ್ಷಿ ನನಗೆ ಅದು ಏನು ಎಂದು ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಮಹಜರಾಗಿದ್ದು ಸಾಕ್ಷಿ ಅದಕ್ಕೆ ನಾನು ಹೆಬ್ಬೆಟ್ಟು ಗುರುತು ಹಾಕಿರುವುದಾಗಿ ನುಡಿದಿರುವುದರಿಂದ ಸದರಿ ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಮಾನ್ಯ ಸ.ಸ.ಅ. ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ತನ್ನ ದೂರಿನ, ಮಹಜರ್ ನ ಹಾಗೂ ತನ್ನ ಹೇಳಿಕೆಯ ಅಂಶಗಳಿಗೆ ವಿರುದ್ದವಾಗಿ ಸಾಕ್ಷ್ಯಮತ್ತು ನುಡಿಯುತ್ತಿದ್ದ ರಿಂದ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)**

## ಪಾಟೀಸವಾಲುಃ- ಮಾನ್ಯ ಸ.ಸ.ಅ. ರವರಿಂದಃ-

**3.** ದಿಃ 16.06.2016 ರಂದು ಸಂಜೆ 2 ಗಂಟೆ ಸಮಯದಲ್ಲಿ ಘಟನೆ ನಡದಿರುತ್ತದೆ ಎಂದರೆ ಸರಿ. ಜಮೀನಿನ ವಿಚಾರವಾಗಿ ಆರೋಪಿಗಳು ನನ್ನನ್ನು ಮುಂದಕ್ಕೆ ಹೋಗದಂತೆ ತಡೆದಿದ್ದಾರೆ ಎಂದರೆ ಸರಿ. ಆರೋಪಿಗಳು ನನಗೆ ಅವಾಚ್ಯಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ ಮತ್ತು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ದಿಃ 12.07.2016 ರಂದು ನಾನು ವಕೀಲರ ಮೂಲಕ ಖಾಸಗಿ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದೂರಿನ ಆಧಾರದ ಮೇಲೆ ಸದರಿ ದೂರಿನ ಆಧಾರದ ಮೇಲೆ ಪೊಲೀಸರು ಆರೋಪಿಗಳ ವಿರುದ್ದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಪ್ರದಮ ವರ್ತಮಾನ ವರದಿ ಮೇಲೆ ದಿಃ 10.08.2016 ರಂದು ಬೆಳಗ್ಗೆ 10 ರಿಂದ 10.30 ಕ್ಕೆ ಪೊಲೀಸರು ಸ್ಥಳಕ್ಕೆ ಬಂದು

ಸ್ಥಳ ಮಹಜರು ಕ್ರಮವನ್ನು ಜರುಗಿಸಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸ 6 ಮತ್ತು 7 ರವರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ದಿಃ 10.08.2016 ರಂದು ನಾನು ಪೊಲೀಸರಿಗೆ ಮುಂದುವರಿದ ಹೇಳಿಕೆ ನೀಡಿದ್ದು ಸದರಿ ಹೇಳಿಕೆಯಲ್ಲಿ ಗ್ರಾಮದಲ್ಲಿ ನ್ಯಾಯಪಂಚಾಯಿತಿ ಮಾಡುತ್ತೇವೆ ಎಂದು ತಿಳಿಸಿದ್ದರಿಂದ ತಡವಾಗಿ ದೂರು ಕೊಟ್ಟಿದ್ದೇನೆ ಎಂದು ಹಾಗೂ ಆರೋಪಿಗಳು ದೊಣ್ಣಯಿಂದ ಮತ್ತು ಚಪ್ಪಲಿಯಿಂದ ಹೊಡೆದಿರುವುದಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.  ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ ಈ ದಿನ 1 ಮತ್ತು 3 ನೆ ಆರೋಪಿ ಹಾಜರಿದ್ದಾರೆ , 2 ನೆ ಆರೋಪಿ ಗೈರು ಹಾಜರಾಗಿದ್ದು ಗೈರು ಹಾಜರಿ ಅರ್ಜಿ ಸಲ್ಲಿಸಿರುತ್ತಾರೆ.

<u>ಪಾಟೀಸವಾಲುಃ- ಆರೋಪಿತರ  ಪರ ವಕೀಲರಿಂದಃ-</u>

ನಾನು ಮೊದಲ ಬಾರಿಗೆ ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದೆ ಎಂದು ಹೇಳುವ ದೂರಿನ ಪ್ರತಿ ನ್ಯಾಯಾಲಯದಲ್ಲಿ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿದಿದ್ದಾರೆ. ಪೊಲಿಸರು ಮಹಜರು ಮಾಡಲು ಬಂದಾಗ ನಾನು ನನ್ನ ಹೆಬ್ಬೆಟ್ಟು ಗುರುತನ್ನು ಹಾಕಿರುತ್ತೇನೆ. ನನಗೆ ಓದಲು ಬರದೆ ಇರುವ ಕಾರಣ ಮಹಜರನಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಪೊಲೀಸರು ಠಾಣೆಯಲ್ಲ ಕುಳಿತುಕೊಂಡು ಮಹಜರನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಟವಲು ಹಿಡಿದುಕೊಂಡು ನನಗೆ ಹೊಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಆಸ್ತಿಯಲ್ಲಿ ಭಾಗವನ್ನು ಕೊಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಾಗದ ಕೇಸು ಸಂಖ್ಯೆ ಓಎಸ್ 141/16 ಇದೆ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. 2 ನೆ ಆರೋಪಿ ನನ್ನವಿರುದ್ದ ಭಾಗ ಕೋರಿ ಹಾಕಿರುತ್ತಾನೆ ಎಂದರೆ ಸರಿ. ಆರೋಪಿಗಳಿಗೆ ಕೊಡಬೇಕಾದ ಭಾಗವನ್ನು ಕೊಡದೆ ಅವರಿಗೆ ಹೆದರಿಸುವ ಸಲುವಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ನಾನು ಹೆಬ್ಬೆಟ್ಟು ಗುರುತನ್ನು ಪೊಲಿಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿ.

**(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್ಸಿ
ಮಳವಳ್ಳಿ